## ಹೊಸತು




## ಉಷಾ ಹ್ಯಾಂಡ್‌ಮಿಕ್ಸರ್

ಗೃಹೋಪಯೋಗಿ ವಸ್ತುಗಳಿಗೆ ಹೆಸರಾದ ಉಷಾ ಇದೀಗ ಹೊಸ ಮಾದರಿಯ ಹ್ಯಾಂಡ್‌ಮಿಕ್ಸರ್ ಮತ್ತು ಡೀಪ್ ಫ್ರೈಯರ್ ಎಂಬ ಎರಡು ಉತ್ಪನ್ನಗಳನ್ನು ಮಾರುಕಟ್ಟೆಗೆ ತಂದಿದೆ. ಡೀಪ್ ಫ್ರೈಯರ್ ಬೆಲೆ 3795 ರೂಪಾಯಿ ಮತ್ತು ಹ್ಯಾಂಡ್‌ಮಿಕ್ಸರ್ ಬೆಲೆ 2995 ರೂಪಾಯಿ. ಎಲ್ಲ ಪ್ರಮುಖ ಗೃಹೋಪಯೋಗಿ ಮಳಿಗೆಗಳಲ್ಲಿ ಸಿಗುತ್ತದೆ.




## ಪ್ರೆಗ್ನೆನ್ಸಿ ಟೆಸ್ಟ್ ಕಿಟ್

ಕ್ಲಿಯಬ್ಲ್ಯೂ ಬ್ರ್ಯಾಂಡ್ ಎಂಬ ಪ್ರೆಗ್ನೆನ್ಸಿ ಟೆಸ್ಟ್ ಕಿಟ್ ಹೊಸದಾಗಿ ಮಾರುಕಟ್ಟೆಗೆ ಬಂದಿದೆ. ಗರ್ಭಧಾರಣೆ ಹಾಗೂ ಅಂಡೋತ್ಪತ್ತಿ ಪರೀಕ್ಷೆಯನ್ನು ಈ ಕಿಟ್‌ನ ಸಹಾಯದಿಂದ ಮನೆಯಲ್ಲೇ ಮಾಡಿಕೊಳ್ಳಬಹುದು. ಇದು ಶೇಕಡ 99ನಿಖರವಾದ ಫಲಿತಾಂಶ ನೀಡುತ್ತದೆ ಎನ್ನುವುದು ಕಂಪೆನಿ ವಿವರಣೆ.

ಹೊಸ ತಲೆಮಾರಿನ ಮಹಿಳೆಯರ ಅವಶ್ಯಕತೆಗಳಿಗೆ ಅನುಗುಣವಾಗಿ ಇದನ್ನು ಅಭಿವೃದ್ಧಿಪಡಿಸಡಿಸಲಾಗಿದೆ. ಅನುಕೂಲಕರ ಮತ್ತು ಆರೋಗ್ಯಕರ ರೀತಿಯ ಗರ್ಭಧಾರಣೆಗಾಗಿ ಪ್ಲಸ್ (+) ಗರ್ಭಧಾರಣೆ ಇಲ್ಲದಿರುವುದಕ್ಕಾಗಿ ಮೈನಸ್ (−) ಎಂದು ಓದಲು ಸುಲಭವಾದ ರೂಪದಲ್ಲಿ ಮುದ್ರಿಸಲಾಗಿದೆ. ಮೂತ್ರವನ್ನು ಸಂಗ್ರಹಿಸುವ ಅಗತ್ಯವಿಲ್ಲ ಮತ್ತು ಡ್ರಾಪಸರ್ ಇಂದ ದೂರವಿರುವಬಹುದು. ಪರೀಕ್ಷಿಸುವ ವಿಧಾನವೂ ಸುಲಭ. ಫ್ಲಡ್ ಗಾಡರ್ ಟೆಸ್ಟ್ ಟಿಪ್ ಮೇಲೆ ಹೆಚ್ಚುವರಿ ಮೂತ್ರದ ಹರಿವಿನ ವಿರುದ್ಧ ರಕ್ಷಣೆಯನ್ನು ನೀಡುತ್ತದೆ. ಕೊಠಡಿಯ ತಾಪಮಾನದಲ್ಲಿ ಸಂಗ್ರಹಿಸಿ ಇಡಬಹುದು. ಮುಟ್ಟಿನ ದಿನಾಂಕದಲ್ಲಿಯೂ ಹಗಲು ಅಥವಾ ರಾತ್ರಿ ಯಾವುದೇ ಸಮಯದಲ್ಲಿ ಗರ್ಭಧಾರಣೆಯ ಪರೀಕ್ಷೆಯನ್ನು ನಡೆಸಬಹುದು.

ಬೆಲೆ, ಲಭ್ಯತೆ ಮತ್ತಿತರ ಮಾಹಿತಿಗಾಗಿ 9810543207/ 9811859775/ 9711983594

## ಲವಿ ಬ್ಯಾಗ್, ಆ್ಯಸೆಸ್ಸರೀಸ್



ಫ್ಯಾಷನ್ ಬ್ರ್ಯಾಂಡ್ ಆಗಿರುವ ಲವಿ ಇದೀಗ ಸ್ಪ್ರಿಂಗ್ ಸಮ್ಮರ್ ಸಂಗ್ರಹವಾಗಿ ಹೊಸ ಬಗೆಯ ವಿವಿಧ ಸ್ಟೈಲಿಷ್ ಉತ್ಪನ್ನಗಳನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿದೆ. ಇದರಲ್ಲಿ ಬ್ಯಾಗ್‌ಗಳು, ವ್ಯಾಲೆಟ್, ಶೂ, ಪರ್ಸ್ ಮುಂತಾದ ವಸ್ತುಗಳಿವೆ. ಆಕರ್ಷಕ ಬಣ್ಣಗಳಲ್ಲಿ ಸಿಗುತ್ತದೆ. ಬೆಲೆ 1490 ರೂಪಾಯಿಯಿಂದ ಆರಂಭ. ಎಲ್ಲ ಪ್ರಮುಖ ಮಳಿಗೆಗಳಲ್ಲಿ ಲಭ್ಯ.

## ಹೊಸ ಜಿಯೋನಿ ಎಂ2 ಫೋನ್

ಶಕ್ತಿಶಾಲಿ ಬ್ಯಾಟರಿ, ವೇಗದ ಇಂಟರ್ನೆಟ್ ಸಂಪರ್ಕ ಹಾಗೂ ಕ್ಷಣಮಾತ್ರದಲ್ಲಿ ಕೇಳಿದ್ದನ್ನು ಬಿತ್ತರಿಸುವ, ಬಹು ಕಾರ್ಯಗಳನ್ನು ಏಕಕಾಲದಲ್ಲಿ ನಿರ್ವಹಿಸಬಲ್ಲ ಸಾಮರ್ಥ್ಯ ಹೊಂದಿರುವ ಜಿಯೋನಿ ಎಂ2 ಫೋನ್ ಮಾರುಕಟ್ಟೆಗೆ ಬಂದಿದೆ. ಅತ್ಯಾಧುನಿಕ ತಂತ್ರಜ್ಞಾನವಿರುವ ಈ ಮೊಬೈಲ್‌ನ ಎಲಿಫ್–ಇ7 ಹಾಗೂ ಇ7 ಹ್ಯಾಂಡ್‌ಸೆಟ್‌ಗಳು ಈಗ ಲಭ್ಯ.



ಜಿಪ್ಯಾಡ್–ಜಿ4

ಸುಂದರ ಹಾಗೂ ಅತ್ಯಂತ ಸಪೂರದ ಜಿಪ್ಯಾಡ್ ಜಿ4ನ ಒಟ್ಟು ದಪ್ಪ ಕೇವಲ 7.95 ಮಿ.ಮೀ. ಮಾತ್ರ. ಇದರೊಳಗೆ 1.5 ಗಿಗಾಹರ್ಟ್ ಕ್ವಾಡ್ ಕೋರ್ ಪ್ರೊಸೆಸ್ಸರ್ ಇದೆ. ಇದು ಕಡಿಮೆ ವಿದ್ಯುತ್ ಬಳಕೆ ಮಾಡಿ ಗರಿಷ್ಠ ಕೆಲಸವನ್ನು ನಿರ್ವಹಿಸುತ್ತದೆ. 14.48 ಸೆಂ.ಮೀ.ನಷ್ಟು ಹೆಚ್ಚಿ ಎಲ್ಲಿಡಿ ವಿಶಾಲ ಪರದೆಯು ಸ್ಪಷ್ಟ ಹಾಗೂ ಉತ್ಕೃಷ್ಟ ಗುಣಮಟ್ಟದ ಚಿತ್ರ ಹಾಗೂ ದೃಶ್ಯಗಳನ್ನು ಬಿತ್ತರಿಸುತ್ತದೆ ಎನ್ನುತ್ತದೆ ಕಂಪೆನಿ. ಕಪ್ಪು ಹಾಗೂ ಬಿಳಿ ಬಣ್ಣಗಳಲ್ಲಿ ಸಿಗುತ್ತದೆ. ಬೆಲೆ 10,999 ರೂಪಾಯಿ.

ವಿವರಕ್ಕೆ: 9916748859




## ಜಾಸ್ ಸ್ಪ್ರೇ ಸುಗಂಧ ದ್ರವ್ಯ

ಸುಗಂಧ ದ್ರವ್ಯಗಳಿಗೆ ಹೆಸರಾದ ಎಸ್‌ಎಫ್‌ಪಿ ಪ್ರೈ.ಲಿ.ಕಂಪೆನಿ ಇದೀಗ ಜಾಸ್ ಹೆಸರಿನಲ್ಲಿ ಸುಗಂಧ ಸ್ಪ್ರೇ ಒಂದನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿದೆ. ಇದು ಮಹಿಳೆಯರು ಮತ್ತು ಪುರುಷರು ಇಬ್ಬರೂ ಬಳಸಬಹುದು. ಇದನ್ನು ಸಿಂಪಡಿಸಿಕೊಂಡರೆ ನವಿರಾದ ಭಾವನೆಗಳು, ಕನಸುಗಳು, ಆಕಾಂಕ್ಷೆಗಳು ಹೊರಹೊಮ್ಮುತ್ತವೆ ಎನ್ನವುದು ಕಂಪೆನಿ ನೀಡುವ ಹೇಳಿಕೆ. 20ಎಂಎಲ್ ಸ್ಯಾಚೆಗಳಲ್ಲಿ ಸಿಗುತ್ತದೆ. ಬೆಲೆ 20 ರೂಪಾಯಿ.

ಮಾಹಿತಿಗೆ: 9884240340

## ಆಕರ್ಷಕ ಡ್ರೆಸ್

ಜನಪ್ರಿಯ ಆನ್‌ಲೈನ್ ಬ್ರ್ಯಾಂಡ್ ಕಂಪೆನಿ ಲೈಮ್‌ರೋಡ್.ಕಾಂ ಇದೀಗ ಹಳದಿ ಬಣ್ಣದ ವಿವಿಧ ಉಡುಪುಗಳ ಸಂಗ್ರಹವನ್ನು ಬಿಡುಗಡೆ ಮಾಡಿದೆ. ಇದರಲ್ಲಿ ಸಲ್ವಾರ್, ಸೀರೆಗಳು ಇವೆ. 'ಯೆಲ್ಲೋ ಸನ್, ವಾಹ್ ವಾಟ್ ಫನ್' ಎಂಬ ಸ್ಲೋಗನ್‌ನೊಂದಿಗೆ ಹೊರತಂದ ಈ ಉಡುಪುಗಳು ಆಧುನಿಕ ಮನೋಭಾವದವರಿಗೆ ಸೂಕ್ತವಾಗಿದೆ. ಬೆಲೆ 399 ರೂಪಾಯಿಗಳಿಂದ ಆರಂಭ.

ವಿವರಕ್ಕೆ: 9873108776, 9540742923

